ಕರ್ನಾಟಕ ಸರ್ಕಾರ

ಸಂಖ್ಯೆ: ಸಕಇ 448 ಎಸ್‌ಎಲ್‌ಪಿ 2020

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ,
ಬೆಂಗಳೂರು, ದಿನಾಂಕ:08-02-2021

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು

ಇವರಿಗೆ:

ವ್ಯವಸ್ಥಾಪಕ ನಿರ್ದೇಶಕರು,
ಡಾ|| ಬಾಬು ಜಗಜೀವನ ರಾಂ
ಚರ್ಮ ಕೈಗಾರಿಕ ಅಭಿವೃದ್ಧಿ ನಿಗಮ ನಿ,
ನಂ.32 ಲಿಡ್ಕರ್ ಭವನ, ಮಿಲ್ಲರ್ ಟ್ಯಾಂಕ್ ಬಂಡ್ ಏರಿಯಾ,
ಯು.ಎಸ್.ಐ ಬಿಲ್ಡಿಂಗ್, ಎದುರು ವಸಂತ ನಗರ,
ಬೆಂಗಳೂರು-52

ಮಾನ್ಯರೇ,

ವಿಷಯ: ಡಾ||ಬಾಬು ಜಗಜೀನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವು ಹಮ್ಮಿಕೊಂಡಿರುವ ವಿವಿಧ ಯೋಜನೆಗಳ ಅನುಷ್ಠಾನ ಸಂಬಂಧ ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: ನಿಮ್ಮ ಪತ್ರ ಸಂಖ್ಯೆ: ಲಿಡ್ಕರ್/ಅಭಿವೃದ್ಧಿ/2020-21/2044 ದಿನಾಂಕ: 04-12-2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದಿಂದ ನೀಡಲಾಗುವ ಸಹಾಯಧನವನ್ನು ಬ್ಯಾಂಕ್ ಸಾಲದೊಂದಿಗೆ ಬಳಸಿಕೊಂಡು ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಮತ್ತು ಯಾವುದೇ ಕಾರಣದಿಂದ ಸಹಾಯಧನ ದುರುಪಯೋಗವಾಗದಂತೆ ತಡೆಯಲು ಹಾಗೂ ಆಸ್ತಿ ಸೃಜನೆ ಖಾತ್ರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಈ ಕೆಳಕಂಡ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ಅನುಬಂಧದಲ್ಲಿನ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಸರ್ಕಾರದ ಅನುಮೋದನೆ ನೀಡಿದೆ ಎಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

1. ಅನುಬಂಧ-1: ಸ್ವಾವಲಂಬಿ ಮಾರಾಟ ಮಳಿಗೆ ಯೋಜನೆ
2. ಅನುಬಂಧ-2: ಸಂಚಾರಿ ಮಾರಾಟ ಮಳಿಗೆ ಯೋಜನೆ.
3. ಅನುಬಂಧ-3: ದುಡಿಮೆ ಬಂಡವಾಳ ಸಹಾಯ ಯೋಜನೆ.
4. ಅನುಬಂಧ-4: ಚರ್ಮಶಿಲ್ಪ ಯಂತ್ರಾಧಾರಿತ ಉತ್ಪಾದನಾ ಘಟಕಗಳ ಸ್ಥಾಪನೆ.
5. ಅನುಬಂಧ-5: ಚರ್ಮಕಾರರ ಕಿರು ಆರ್ಥಿಕ ಚಟುವಟಿಕೆಗಳಿಗಾಗಿ ನೇರ ಸಾಲ ಯೋಜನೆ.

ತಮ್ಮ ನಂಬುಗೆಯ

(ಎಲ್.ನರಸಿಂಹಮೂರ್ತಿ) 8/2
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ

Scanned with CamScanner

## ಅನುಬಂಧ-1

## ಸ್ವಾವಲಂಬಿ ಮಾರಾಟ ಮಳಿಗೆ ಯೋಜನೆ:

1. ಆಯ್ಕೆಯಾದ ಫಲಾನುಭವಿಗಳಿಗೆ ಯೋಜನೆ ಬಗ್ಗೆ ತಿಳುವಳಿಕೆ/ ತರಬೇತಿ ನೀಡುವುದು ಮತ್ತು ಯೋಜನಾ ವರದಿಯನ್ನುತಯಾರಿಸಲು ನಿಗಮದಿಂದ ಸಹಕರಿಸುವುದು.

2. ಯೋಜನೆಯ ಮಾರ್ಗಸೂಚಿಯಂತೆ ಆಯ್ಕೆಯಾದ ಅರ್ಹ ಫಲಾನುಭವಿಗಳು ಮಾರಾಟ ಮಳಿಗೆ ಸ್ಥಾಪಿಸಲು ಮಳಿಗೆಯನ್ನು ಗುರ್ತಿಸಿಕೊಳ್ಳತಕ್ಕದ್ದು. ಸ್ವಂತ ಮಳಿಗೆ ಇಲ್ಲದೇ ಇದ್ದಲ್ಲಿ, ಬಾಡಿಗೆ ಮೇಲೆ ಮಳಿಗೆಯನ್ನು ತೆಗೆದುಕೊಳ್ಳಬಹುದು. ಇದರ ಜೊತೆಗೆ ಮಳಿಗೆ ಒಳವಿನ್ಯಾಸಕ್ಕೆ ತಗಲುವ ವೆಚ್ಚ ಮತ್ತು ದಾಸ್ತಾನು ಖರೀದಿಗಾಗಿ ಅವಶ್ಯವಿರುವ ದುಡಿಮೆ ಬಂಡವಾಳವನ್ನು ಅಂದಾಜಿಸಿ ಸಹಾಯಧನದೊಂದಿಗೆ ಬ್ಯಾಂಕುಗಳಿಂದ ಸಾಲ ಪಡೆಯುವ ಬಗ್ಗೆ ಮತ್ತು ಸಾಲವನ್ನು ಮರುಪಾವತಿಸುವ ಕುರಿತು ವಿವರವಾದ ಪ್ರಸ್ತಾವನೆ ತಯಾರಿಸಿ ಸಾಲ ಮಂಜೂರಾತಿಗೆ ಜಿಲ್ಲಾ ಸಂಯೋಜಕರ ಮೂಲಕ ಬ್ಯಾಂಕ್‌ಗೆ ಸಲ್ಲಿಸುವುದು (ಯೋಜನಾ ವರದಿ).

3. ಬ್ಯಾಂಕ್‌ಗಳಿಂದ ಸಾಲ ಮಂಜೂರಾದ ನಂತರ ಮಂಜೂರಾತಿ ಆಧಾರದ ಮೇಲೆ ಮೊದಲನೇ ಕಂತಿನಂತೆ ಶೇ.50% ರಷ್ಟು ಸಹಾಯಧನವನ್ನು ಮಂಜೂರು ಮಾಡಿ ಬ್ಯಾಂಕಿಗೆ ನೇರವಾಗಿ ನಿಗಮದಿಂದ ಜಮೆ ಮಾಡುವುದು.

4. ಲಿಡಕರ್ ಜಿಲ್ಲಾ ಸಂಯೋಜಕರು ಮತ್ತು ಸಾಲ ಮಂಜೂರು ಮಾಡಿದ ಬ್ಯಾಂಕ್‌ನ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿ ಸ್ವಾವಲಂಬಿ ಮಾರಾಟ ಮಳಿಗೆ ಫಲಾನುಭವಿಯು ಮಳಿಗೆ ಮಾಲೀಕರೊಡನೆ ಒಪ್ಪಂದ ಮಾಡಿಕೊಂಡಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳತಕ್ಕದ್ದು. ಮಳಿಗೆ ಪಡೆಯಲು ಮುಂಗಡ ಹಣ ಬೇಕಾದಲ್ಲಿ ಬ್ಯಾಂಕಿಗೆ ಫಲಾನುಭವಿಯು ಪತ್ರ ಸಲ್ಲಿಸತಕ್ಕದ್ದು. ಬ್ಯಾಂಕ್ ಸಹಾಯಧನ ಮತ್ತು ಸಾಲ ಸೇರಿಸಿ ಮಳಿಗೆ ಮಾಲೀಕರಿಗೆ ಮುಂಗಡ ಹಣ ನೀಡುವುದು.

5. ಇದಾದ ನಂತರ ಮೊದಲನೇ ಕಂತಿನಲ್ಲಿ ನೀಡಿರುವ ಸಹಾಯಧನದಲ್ಲಿ ಉಳಿದ ಸಹಾಯಧನವನ್ನು ಮತ್ತು ಸಾಲವನ್ನು ಮಳಿಗೆ ಸಿದ್ಧಪಡಿಸಲು ಒಳ ವಿನ್ಯಾಸದ (Interior) ಇತ್ಯಾದಿಗಳಿಗೆ ಉಪಯೋಗಿಸಲು ಫಲಾನುಭವಿಗಳ ಸಹಮತಿ ಪಡೆದು ಮಳಿಗೆ ಸಿದ್ಧಪಡಿಸಿದ ಗುತ್ತಿಗೆದಾರರಿಗೆ/ ವಿನ್ಯಾಸಗಾರರಿಗೆ ನೇರವಾಗಿ ಹಣ ಪಾವತಿಸುವುದು.

6. 2ನೇ ಕಂತಿನ ಹಣವನ್ನು ಬಿಡುಗಡೆ ಮಾಡಲು ಜಿಲ್ಲಾ ಸಂಯೋಜಕರು ಮಳಿಗೆ ಸಿದ್ಧವಾಗಿರುವುದನ್ನು ದೃಢೀಕರಿಸಿ ಭಾವಚಿತ್ರ ಹಾಗೂ ಬ್ಯಾಂಕ್ ಸ್ಟೇಟ್‌ಮೆಂಟ್‌ದೊಂದಿಗೆ ಕೇಂದ್ರ ಕಛೇರಿಯಿಂದ ಬ್ಯಾಂಕಿಗೆ ಹಣ ಬಿಡುಗಡೆ ಮಾಡಲು ಶಿಫಾರಸ್ಸು ಮಾಡುವುದು. ಇದಾದ ನಂತರ 2ನೇ ಕಂತಿನಲ್ಲಿ ನಿಗಮದಿಂದ ಶೇ.50% ರಷ್ಟು ಸಹಾಯಧನವನ್ನು ಬ್ಯಾಂಕಿಗೆ ಜಮೆ ಮಾಡುವುದು. ಫಲಾನುಭವಿ ಸರಕು ಸರಬರಾಜುದಾರರಿಂದ ಸರಕು ಪಡೆದಿದ್ದಲ್ಲಿ ಮತ್ತು ಆ ಬಗ್ಗೆ ಬ್ಯಾಂಕಿಗೆ ಪತ್ರ ನೀಡಿದ್ದಲ್ಲಿ ಬ್ಯಾಂಕ್ ಮತ್ತು ನಿಗಮದ ಅಧಿಕಾರಿಗಳು ಪರಿಶೀಲಿಸಿ ಅದರಂತೆ ಬ್ಯಾಂಕುಗಳಿಂದ ನೇರವಾಗಿ ಸರಕು ಸರಬರಾಜುದಾರರಿಗೆ ಹಣ ಪಾವತಿಸುವುದು.

Scanned with CamScanner

7. ನಿಗಮದ ಅಧಿಕಾರಿಗಳು ಮತ್ತು ಬ್ಯಾಂಕಿನ ಅಧಿಕಾರಿಗಳು ಮಳಿಗೆಗೆ ಸರಕು ಬಂದಿರುವ ಬಗ್ಗೆ ಮತ್ತು ಫಲಾನುಭವಿ ಮಾರಾಟ ಮಳಿಗೆ ಆರಂಭಿಸಿರುವ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ಖಾತ್ರಿಪಡಿಸಿಕೊಂಡು ಕೇಂದ್ರ ಕಛೇರಿಗೆ ಘಟಕ ಪರಿಶೀಲನಾ ವರದಿಯನ್ನು ಭಾವಚಿತ್ರದೊಂದಿಗೆ ಸಲ್ಲಿಸುವುದು.

8. ಬ್ಯಾಂಕ್ ಅಧಿಕಾರಿಗಳು ಸಹಾಯಧನ ಮತ್ತು ಸಾಲವನ್ನು ಯೋಜಿಸಿದಂತೆ ಮಳಿಗೆ ಪ್ರಾರಂಭಿಸಿ ಉಪಯೋಗಿಸಿಕೊಂಡಿರುವ ಬಗ್ಗೆ ಅಂತಿಮವಾಗಿ ಬ್ಯಾಂಕ್ ಸ್ಟೇಟ್‌ಮೆಂಟ್ ಇತ್ಯಾದಿಗಳೊಂದಿಗೆ ಜಿಲ್ಲಾ ಸಂಯೋಜಕರು ಅಂತಿಮ ವರದಿಯನ್ನು ನಿಗಮದ ಕೇಂದ್ರ ಕಛೇರಿಗೆ ಸಲ್ಲಿಸುವುದು.

9. ಮಳಿಗೆ ಪ್ರಾರಂಭವಾದ ನಂತರ ಫಲಾನುಭವಿಗಳಿಗೆ ಮತ್ತೊಮ್ಮೆ ಮಾರಾಟ ಮತ್ತು ದಾಖಲೆಗಳನ್ನು ನಿರ್ವಹಿಸುವುದು ಹಾಗೂ ಗ್ರಾಹಕರ ಜೊತೆ ಸಂಬಂಧ ಇತ್ಯಾದಿಗಳ ಬಗ್ಗೆ ಎರಡನೇ ಬಾರಿ ತಜ್ಞರಿಂದ ತರಬೇತಿಯನ್ನು ನೀಡುವುದು.

ವ್ಯವಸ್ಥಾಪಕ ನಿರ್ದೇಶಕರು

## ಅನುಬಂಧ-2

## ಸಂಚಾರಿ ಮಾರಾಟ ಮಳಿಗೆ ಯೋಜನೆ:

1. ಆಯ್ಕೆಯಾದ ಫಲಾನುಭವಿಗಳಿಗೆ ಯೋಜನೆ ಬಗ್ಗೆ ತಿಳುವಳಿಕೆ/ ತರಬೇತಿ ನೀಡುವುದು ಮತ್ತು ಯೋಜನಾ ವರದಿಯನ್ನು ತಯಾರಿಸಲು ನಿಗಮದಿಂದ ಸಹಕರಿಸುವುದು.

2. ಯೋಜನೆಯ ಮಾರ್ಗಸೂಚಿಯಂತೆ ಆಯ್ಕೆಯಾದ ಅರ್ಹ ಫಲಾನುಭವಿಗಳು ವಾಹನ ತಯಾರಿಕಾ ಕಂಪನಿಯಿಂದದರ ಪಟ್ಟಿ ಪಡೆಯುವಾಗ ವಾಹನ ಇಂಜಿನ್ ಮತ್ತು ಛಾರ್ಸಿಗೆ ತಗಲುವ ವೆಚ್ಚ, ನಿಗಮವು ನಿಗಧಿಪಡಿಸಿದ ವಿನ್ಯಾಸದಂತೆ ಬಾಡಿ ಬಿಲ್ಡ್ ಮಾಡಲು ತಗಲುವ ವೆಚ್ಚವನ್ನು ಪ್ರತ್ಯೇಕವಾಗಿ ನಮೂದಿಸುವಂತೆ ತಿಳಿಸುವುದು. ಈ ರೀತಿ ದರಪಟ್ಟಿ ಪಡೆದು ವ್ಯಾಪಾರ ಪ್ರಾರಂಭಿಸಲು ಬೇಕಾಗುವ ದಾಸ್ತಾನು ಖರೀದಿಸಲು ಅವಶ್ಯವಿರುವ ಮೊತ್ತವನ್ನು ಸೇರಿಸಿ ಪ್ರಸ್ತಾವನೆ ಸಿದ್ಧಪಡಿಸಿ ಸಾಲ ಮಂಜೂರಾತಿಗಾಗಿ ಜಿಲ್ಲಾ ಸಂಯೋಜಕರ ಮೂಲಕ ಬ್ಯಾಂಕ್‌ಗೆ ಸಲ್ಲಿಸುವುದು.

3. ಬ್ಯಾಂಕ್‌ಗಳಿಂದ ಸಾಲ ಮಂಜೂರಾದ ನಂತರ ಮಂಜೂರಾತಿ ಆಧಾರದ ಮೇಲೆ ಮೊದಲನೇ ಕಂತಿನಂತೆ ಶೇ.70% ರಷ್ಟು ಸಹಾಯಧನವನ್ನು ಮಂಜೂರು ಮಾಡಿ ಬ್ಯಾಂಕಿಗೆ ನೇರವಾಗಿ ನಿಗಮದಿಂದ ಜಮೆ ಮಾಡುವುದು.

4. ಲಿಡಕರ್ ಜಿಲ್ಲಾ ಸಂಯೋಜಕರು ಮತ್ತು ಸಾಲ ಮಂಜೂರು ಮಾಡಿದ ಬ್ಯಾಂಕ್‌ನ ಅಧಿಕಾರಿಗಳು ಜಂಟಿಯಾಗಿ ಫಲಾನುಭವಿ ಸಲ್ಲಿಸಿರುವ ವಾಹನ ಸರಬರಾಜು ಸಂಸ್ಥೆಯ ದರಪಟ್ಟಿಯನ್ನು ಪರಿಶೀಲನೆ ಮಾಡಿ ಸಂಚಾರಿ ಮಾರಾಟ ಮಳಿಗೆ ಆರಂಭಿಸಲು ಅನುಕುಲವಾಗುವಂತೆ ವಾಹನ ಖರೀದಿಗೆ ಫಲಾನುಭವಿಯ ಒಪ್ಪಿಗೆ ಪತ್ರ ಪಡೆದು, ನಂತರ ವಾಹನ ಸರಬರಾಜು ಸಂಸ್ಥೆಗೆ ಹಣ ಪಾವತಿ ಮಾಡಬೇಕು.

5. ವಾಹನ ಡೆಲಿವರಿ ಪಡೆದ ನಂತರ ಬಾಡಿ ಬಿಲ್ಡಿಂಗ್ ಮಾಡಲು ಮತ್ತು ಸಾಮಗ್ರಿಗಳನ್ನು ಖರೀದಿಸಲು ಅವಶ್ಯವಿರುವ ದುಡಿಮೆ ಬಂಡವಾಳವನ್ನು ಬಿಡುಗಡೆ ಮಾಡುವಂತೆ ಪ್ರತ್ಯೇಕವಾಗಿ ಸಂಬಂಧಿಸಿದ ಬಾಡಿ ಬಿಲ್ಡಿಂಗ್ ಸಂಸ್ಥೆ ಮತ್ತು ಸರಕು ಸರಬರಾಜು ಸಂಸ್ಥೆಗಳ ದರಪಟ್ಟಿಯನ್ನು ಜಿಲ್ಲಾ ಸಂಯೋಜಕರ ಮೂಲಕ ಕೇಂದ್ರ ಕಛೇರಿಗೆ ಸಲ್ಲಿಸುವುದು. ನಂತರ ಉಳಿದ ಶೇ.30 ರಷ್ಟು ಸಹಾಯಧನವನ್ನು ಬ್ಯಾಂಕ್‌ಗೆ ನೇರವಾಗಿ ಕೇಂದ್ರ ಕಛೇರಿಯಿಂದ ಬಿಡುಗಡೆ ಮಾಡುವುದು. ನಂತರ, ಬ್ಯಾಂಕ್‌ಗಳು ಸಹಾಯಧನ ಮತ್ತು ಸಾಲವನ್ನು ಸೇರಿಸಿ ಸರಬರಾಜುದಾರರಿಗೆ ಹಣ ಪಾವತಿ ಮಾಡಬೇಕು.

6. ವಾಹನ ಬಿಡುಗಡೆಯಾದ ನಂತರ ಆರ್‌ಟಿಓ ಕಛೇರಿಯಲ್ಲಿ ನೋಂದಣಿ ಮಾಡಿಸಿದ ದಾಖಲೆಗಳ ಪ್ರತಿಯನ್ನು ಮತ್ತು ಸಂಚಾರಿ ಮಾರಾಟ ಮಳಿಗೆ ಆರಂಭವಾಗಿರುವ ಬಗ್ಗೆ ಛಾಯಾಚಿತ್ರಗಳೊಂದಿಗೆ ಘಟಕ ಪರಿಶೀಲನಾ ವರದಿಯನ್ನು ನಿಗಮದ ಜಿಲ್ಲಾ ಸಂಯೋಜಕರು ನಿಗಮಕ್ಕೆ ಸಲ್ಲಿಸುವುದು.

Scanned with CamScanner

7. ಮಾರಾಟ ಮಳಿಗೆ ಮತ್ತು ವ್ಯಾಪಾರ ನಿರ್ವಹಣೆ ಬಗ್ಗೆ ವೈಯಕ್ತಿಕ ಶಿಸ್ತು, ಗ್ರಾಹಕರ ಜೊತೆ ಸಂಬಂಧ, ಸಂವಹನ ಕೌಶಲ್ಯಗಳು, ಹಣಕಾಸು ನಿರ್ವಹಣೆ, ವ್ಯವಹಾರದಲ್ಲಿ ಯಶಸ್ಸು ಹೊಂದುವ ಬಗ್ಗೆ ಎರಡನೇ ಹಂತದ ತರಬೇತಿಯನ್ನು ಫಲಾನುಭವಿಗೆ ನೀಡುವುದು.

ವ್ಯವಸ್ಥಾಪಕ ನಿರ್ದೇಶಕರು

8/2

[illegible]
ವಿಕಾಸ ಸೌಧ, ಬೆಂಗಳೂರು.

Scanned with CamScanner

## ಅನುಬಂಧ-3

## ದುಡಿಮೆ ಬಂಡವಾಳ ಸಹಾಯ ಯೋಜನೆ:

1. ಆಯ್ಕೆಯಾದ ಫಲಾನುಭವಿಗಳಿಗೆ ಯೋಜನೆ ಬಗ್ಗೆ ತಿಳುವಳಿಕೆ/ ತರಬೇತಿ ನೀಡುವುದು ಮತ್ತು ಯೋಜನಾ ವರದಿಯನ್ನು ತಯಾರಿಸಲು ನಿಗಮದಿಂದ ಸಹಕರಿಸುವುದು.

2. ಯೋಜನೆಯ ಮಾರ್ಗಸೂಚಿಯಂತೆ ಆಯ್ಕೆಯಾದ ಅರ್ಹ ಫಲಾನುಭವಿಗಳು ದುಡಿಮೆ ಬಂಡವಾಳ ಯಾವ ಉದ್ದೇಶಕ್ಕಾಗಿ ಬೇಕಾಗಿದೆ ಮತ್ತು ಎಷ್ಟು ಮೊತ್ತ ಬೇಕಾಗಿದೆ ಎಂಬುದರ ಬಗ್ಗೆ ಸ್ಪಷ್ಟವಾಗಿ ಪ್ರಸ್ತಾವನೆ ತಯಾರಿಸಿ ಸಾಲ ಮಂಜೂರಾತಿಗೆ ಜಿಲ್ಲಾ ಸಂಯೋಜಕರ ಮೂಲಕ ಬ್ಯಾಂಕ್‌ಗೆ ಸಲ್ಲಿಸುವುದು.

3. ಬ್ಯಾಂಕ್‌ಗಳಿಂದ ಸಾಲ ಮಂಜೂರಾದ ನಂತರ ಮಂಜೂರಾತಿ ಆಧಾರದ ಮೇಲೆ ಮೊದಲನೇ ಕಂತಿನಂತೆ ಶೇ.50% ರಷ್ಟು ಸಹಾಯಧನವನ್ನು ಮಂಜೂರು ಮಾಡಿ ಬ್ಯಾಂಕಿಗೆ ನೇರವಾಗಿ ನಿಗಮದಿಂದ ಜಮೆ ಮಾಡುವುದು.

4. ಲಿಡಕರ್ ಜಿಲ್ಲಾ ಸಂಯೋಜಕರು ಮತ್ತು ಸಾಲ ಮಂಜೂರು ಮಾಡಿದ ಬ್ಯಾಂಕ್‌ನ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿಮಳಿಗೆ ಇರುವ ಬಗ್ಗೆ ದೃಡಪಡಿಸಿಕೊಂಡು ನಂತರ ಸಹಾಯಧನ ಮತ್ತು ಸಾಲವನ್ನು ಫಲಾನುಭವಿಗಳ ಸಹಮತಿ ಪಡೆದು ಸಾಮಾಗ್ರಿ ಇತ್ಯಾದಿಗಳ ಸರಬರಾಜುದಾರರಿಗೆ ಬಿಡುಗಡೆ ಮಾಡುವುದು.

5. ಮೊದಲನೇ ಕಂತಿನ ಹಣದಲ್ಲಿ ಸರಬರಾಜು ಆದ ಸರಕುಗಳನ್ನು ಉಪಯೋಗಿಸಿ ಮಳಿಗೆಯನ್ನು ಸದುಪಯೋಗಪಡಿಸಿಕೊಂಡು ವ್ಯಾಪಾರ ವಹಿವಾಟು ನಡೆಸುತ್ತಿರುವ ಬಗ್ಗೆ ಛಾಯಾಚಿತ್ರದೊಂದಿಗೆ ಮತ್ತು ಬ್ಯಾಂಕ್ ಸ್ಟೇಟ್‌ಮೆಂಟ್‌ನೊಂದಿಗೆ ನಿಗಮದ ಜಿಲ್ಲಾ ಸಂಯೋಜಕರು ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸಿ ಎರಡನೇ ಕಂತಿನ ಸಹಾಯಧನವನ್ನು ಬ್ಯಾಂಕ್‌ಗೆ ಬಿಡುಗಡೆ ಮಾಡಲು ಶಿಫಾರಸ್ಸು ಮಾಡುವುದು.

6. ಜಿಲ್ಲಾ ಸಂಯೋಜಕರ ವರದಿ ಆಧರಿಸಿ ಎರಡನೇಕಂತಿನ ಶೇ. 50 ರಷ್ಟು ಉಳಿಕೆ ಸಹಾಯಧನವನ್ನು ಬ್ಯಾಂಕ್‌ಗೆ ಜಮೆ ಮಾಡಬೇಕು. ಬ್ಯಾಂಕ್ ಅಧಿಕಾರಿಗಳು ಮತ್ತು ನಿಗಮದ ಅಧಿಕಾರಿಗಳು ಫಲಾನುಭವಿಯ ಮಳಿಗೆ ಪರಿಶೀಲಿಸಿ ಸರಕು ಸರಬರಾಜು ಆಗಿರುವ ಬಗ್ಗೆ ದೃಡಪಡಿಸಿಕೊಂಡು ಸರಕು ಸರಬರಾಜುದಾರರಿಗೆ ಹಣ ಬಿಡುಗಡೆ ಮಾಡುವುದು.

7. ಫಲಾನುಭವಿಗಳು ಉದ್ದೇಶಿತ ಕಾರ್ಯಕ್ಕೆ ಸಹಾಯಧನ ಮತ್ತು ಬ್ಯಾಂಕ್ ಸಾಲ ಬಳಸಿಕೊಂಡು ವ್ಯಾಪಾರ ನಡೆಸುತ್ತಿರುವ ಬಗ್ಗೆ ಜಿಲ್ಲಾ ಸಂಯೋಜಕರುಗಳು ಪರಿಶೀಲಿಸಿ ಖಾತ್ರಿಪಡಿಸಿಕೊಂಡು ಯೋಜನೆಯು ಪರಿಪೂರ್ಣವಾಗಿ ಅನುಷ್ಠಾನಗೊಂಡಿರುವ ಬಗ್ಗೆ ವರದಿಯನ್ನು ಛಾಯಾಚಿತ್ರದೊಂದಿಗೆ ಬ್ಯಾಂಕ್‌ಗೆ ಮತ್ತು ಪ್ರಧಾನ ಕಛೇರಿಗೆ ಸಲ್ಲಿಸುವುದು.

Scanned with CamScanner

8. ಮಾರಾಟ ಮಳಿಗೆ ಮತ್ತು ವ್ಯಾಪಾರ ನಿರ್ವಹಣೆ ಬಗ್ಗೆ ವೈಯಕ್ತಿಕ ಶಿಸ್ತು, ಗ್ರಾಹಕರ ಜೊತೆ ಸಂಬಂಧ, ಸಂವಹನ ಕೌಶಲ್ಯಗಳು, ಹಣಕಾಸು ನಿರ್ವಹಣೆ, ವ್ಯವಹಾರದಲ್ಲಿ ಯಶಸ್ಸು ಹೊಂದುವ ಬಗ್ಗೆ ಎರಡನೇ ಹಂತದ ತರಬೇತಿಯನ್ನು ಫಲಾನುಭವಿಗೆ ನೀಡುವುದು.

ವ್ಯವಸ್ಥಾಪಕ ನಿರ್ದೇಶಕರು

ಸರ್ಕಾರದ ಅಧೀನ ಕಾರ್ಯದರ್ಶಿ
ಬೆಂಗಳೂರು.

Scanned with CamScanner

## ಅನುಬಂಧ-4

## ಚರ್ಮಶಿಲ್ಪ ಯಂತ್ರಾಧಾರಿತ ಉತ್ಪಾದನಾ ಘಟಕಗಳ ಸ್ಥಾಪನೆ:

1. ಆಯ್ಕೆಯಾದ ಫಲಾನುಭವಿಗಳಿಗೆ ಯೋಜನೆ ಬಗ್ಗೆ ತಿಳುವಳಿಕೆ/ತರಬೇತಿ ನೀಡುವುದು ಮತ್ತು ಯೋಜನಾ ವರದಿಯನ್ನು ತಯಾರಿಸಲು ನಿಗಮದಿಂದ ಸಹಕರಿಸುವುದು. ಫಲಾನುಭವಿಯು ಉತ್ಪಾದನಾ ಘಟಕ ಪ್ರಾರಂಭಿಸಲು ಅವಶ್ಯವಿರುವ ಸ್ಥಳಾವಕಾಶ ಹೊಂದಿರುವರೇ ಎಂಬುದನ್ನು ಮತ್ತು ಈ ಘಟಕಕ್ಕೆ ಅವಶ್ಯವಿರುವ ಎಲ್ಲಾ ಅನುಮತಿ / ಲೈಸೆನ್ಸ್ ಪಡೆದುಕೊಳ್ಳುವ ಬಗ್ಗೆ ಫಲಾನುಭವಿಗೆ ಮನವರಿಕೆ ಮಾಡಿಕೊಡಲು ತರಬೇತಿಯಲ್ಲಿ ತಿಳಿಸುವುದು.

2. ಯೋಜನೆಯ ಮಾರ್ಗಸೂಚಿಯಂತೆ ಆಯ್ಕೆಯಾದ ಅರ್ಹ ಫಲಾನುಭವಿಯು ಯೋಜನೆಯ ಘಟಕ ವೆಚ್ಚದ ಮಿತಿಗೆ ಒಳಪಟ್ಟು ಘಟಕ ಸ್ಥಾಪಿಸಲು ಅವಶ್ಯವಿರುವ ಯಂತ್ರೋಪಕರಣಗಳು ಮತ್ತು ಉತ್ಪಾದನಾ ಚಟುವಟಿಕೆಗಳನ್ನು ಪ್ರಾರಂಭಿಸಲು ಅವಶ್ಯವಿರುವ ಕಚ್ಚಾಮಾಲು ಮತ್ತು ಇತರೆ ವೆಚ್ಚಗಳ ಬಗ್ಗೆ ಒಂದು ಯೋಜನಾ ವರದಿಯೊಂದಿಗೆ ಪ್ರಸ್ತಾವನೆ ಸಿದ್ಧಪಡಿಸಿ ಜಿಲ್ಲಾ ಸಂಯೋಜಕರ ಮೂಲಕ ಬ್ಯಾಂಕ್‌ಗೆ ಸಲ್ಲಿಸುವುದು.

3. ಬ್ಯಾಂಕ್‌ಗಳಿಂದ ಸಾಲ ಮಂಜೂರಾದ ನಂತರ ಮಂಜೂರಾತಿ ಆಧಾರದ ಮೇಲೆ ಮೊದಲನೇ ಕಂತಿನಂತೆ ಶೇ.50% ರಷ್ಟು ಸಹಾಯಧನವನ್ನು ಮಂಜೂರು ಮಾಡಿ ಬ್ಯಾಂಕಿಗೆ ನೇರವಾಗಿ ನಿಗಮದಿಂದ ಜಮೆ ಮಾಡುವುದು.

4. ಲಿಡಕರ್ ಜಿಲ್ಲಾ ಸಂಯೋಜಕರು ಮತ್ತು ಸಾಲ ಮಂಜೂರು ಮಾಡಿದ ಬ್ಯಾಂಕ್‌ನ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿ ಚರ್ಮಶಿಲ್ಪ ಘಟಕವನ್ನು ಆರಂಭಿಸಲು ಫಲಾನುಭವಿಯು ಸ್ವಂತ ಸ್ಥಳ ಹೊಂದಿರುವ ಬಗ್ಗೆ ಪರಿಶೀಲಿಸಬೇಕು. ಸ್ವಂತ ಇಲ್ಲದಿದ್ದಲ್ಲಿ, ಬಾಡಿಗೆ / ಲೀಸ್ ಸ್ಥಳದ ಮಾಲೀಕರೊಡನೆ ಒಪ್ಪಂದ ಮಾಡಿಕೊಂಡಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳತಕ್ಕದ್ದು. ಸ್ಥಳ ಬಾಡಿಗೆ / ಲೀಸ್‌ಗೆ ಪಡೆಯಲು ಮುಂಗಡ ಹಣ ಬೇಕಾದಲ್ಲಿ ಬ್ಯಾಂಕಿಗೆ ಫಲಾನುಭವಿಯು ಪತ್ರ ಸಲ್ಲಿಸತಕ್ಕದ್ದು. ಬ್ಯಾಂಕ್ ಸಹಾಯಧನ ಮತ್ತು ಸಾಲ ಸೇರಿಸಿ ಸ್ಥಳದ ಮಾಲೀಕರಿಗೆ ಮುಂಗಡ ಹಣ ನೀಡುವುದು.

5. ಇದಾದ ನಂತರ ಮೊದಲನೇ ಕಂತಿನಲ್ಲಿ ನೀಡಿರುವ ಸಹಾಯಧನದಲ್ಲಿ ಉಳಿದ ಸಹಾಯಧನವನ್ನು ಮತ್ತು ಸಾಲವನ್ನು ಚರ್ಮಶಿಲ್ಪ ಘಟಕವನ್ನು ಆರಂಭಿಸಲು ಅವಶ್ಯವಿರುವ ಒಳವಿನ್ಯಾಸ(Interior)/ ಶೆಡ್ / ವಿದ್ಯುತ್ ಸಂಪರ್ಕ ಮುಂತಾದ ಮೂಲಭೂತ ಅವಶ್ಯಕತೆಗಳನ್ನು ಮಾಡಿಕೊಂಡಿರುವ ಬಗ್ಗೆ ಪರಿಶೀಲನೆ ಮಾಡಿ ಫಲಾನುಭವಿಗಳ ಸಹಮತಿ ಪಡೆದು ಚರ್ಮಶಿಲ್ಪ ಘಟಕವನ್ನು ಸಿದ್ಧಪಡಿಸಿದ ಗುತ್ತಿಗೆದಾರರಿಗೆ/ ವಿನ್ಯಾಸಗಾರರಿಗೆ ನೇರವಾಗಿ ಹಣ ಪಾವತಿಸುವುದು.

6. ಮೊದಲನೇ ಕಂತಿನ ಹಣ ಉದ್ದೇಶಿತ ಘಟಕಕ್ಕೆ ಬಳಕೆಯಾಗಿರುವ ಬಗ್ಗೆ ಜಿಲ್ಲಾ ಸಂಯೋಜಕರು ವರದಿಯನ್ನು ಮತ್ತು ಫಲಾನುಭವಿಯಿಂದ ಮನವಿಯನ್ನು ಪಡೆದುಎರಡನೇಕಂತಿನ ಹಣ ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.

Scanned with CamScanner

7. ಎರಡನೇ ಕಂತಿನ ಹಣವನ್ನು ನಿಗಮದ ಕೇಂದ್ರ ಕಛೇರಿಯಿಂದ ಬ್ಯಾಂಕ್‌ಗೆ ಜಮೆ ಮಾಡುವುದು.

8. ಯಂತ್ರೋಪಕರಣಗಳನ್ನು ಖರೀದಿಸಲು ಕೇಂದ್ರ ಕಛೇರಿಯಿಂದ ಟೆಂಡರ್ ಕರೆದು ದರ ನಿಗದಿಪಡಿಸಿ ಸರಬರಾಜುದಾರರನ್ನು ಎಂಪಾನೆಲ್ ಮಾಡುವುದು. ಫಲಾನುಭವಿಗಳು ಸದರಿ ಸರಬರಾಜುದಾರರಿಂದ ಇನ್‌ವಾಯ್ಸ್ ಗಳನ್ನು ಪಡೆದು ಬ್ಯಾಂಕ್‌ಗೆ ಸಲ್ಲಿಸುವುದು. ಯಂತ್ರೋಪಕರಣಗಳನ್ನು ಸರಬರಾಜು ಮಾಡಿದ ನಂತರ ಬ್ಯಾಂಕ್‌ಗಳು ಸಹಾಯಧನ ಮತ್ತು ಸಾಲ ಸೇರಿಸಿ ನೇರವಾಗಿ ಸರಬರಾಜುದಾರರಿಗೆ ಹಣ ಪಾವತಿಸುವುದು ಮತ್ತು ಉಳಿಕೆ ಹಣವನ್ನು ದುಡಿಮೆ ಬಂಡವಾಳಕ್ಕಾಗಿ ಸರಕು ಸರಬರಾಜುದಾರರಿಗೆ / ಫಲಾನುಭವಿಗೆ ಬ್ಯಾಂಕ್‌ನಿಂದ ಬಿಡುಗಡೆಮಾಡುವುದು.

9. ನಂತರ ಘಟಕ ಸ್ಥಾಪನೆಯಾಗಿ ಉತ್ಪಾದನಾ ಚಟುವಟಿಕೆಗಳನ್ನು ಪ್ರಾರಂಭಿಸಿರುವ ಬಗ್ಗೆ ಕರ್ನಾಟಕ ಚರ್ಮ ತಾಂತ್ರಿಕ ಸಂಸ್ಥೆಯ ಒಬ್ಬ ಸಿಬ್ಬಂದಿ ಮತ್ತು ಜಿಲ್ಲಾ ಸಂಯೋಜಕರು ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿಆಸ್ತಿ ಸೃಜನೆಯಾಗಿರುವ ಬಗ್ಗೆ ಖಾತ್ರಿಪಡಿಸಿಕೊಂಡು ಛಾಯಾಚಿತ್ರ ಸಮೇತ ಘಟಕವನ್ನು ಮಾರುಕಟ್ಟೆ ಸಹಾಯ ಯೋಜನೆಯಡಿ ನೊಂದಾವಣೆ ಮಾಡಲು ಶಿಫಾರಸ್ಸು ಮಾಡುವುದು.

10. ಮಾರಾಟ ಮಳಿಗೆ ಮತ್ತು ವ್ಯಾಪಾರ ನಿರ್ವಹಣೆ ಬಗ್ಗೆ ವೈಯಕ್ತಿಕ ಶಿಸ್ತು, ಗ್ರಾಹಕರ ಜೊತೆ ಸಂಬಂಧ, ಸಂವಹನ ಕೌಶಲ್ಯಗಳು, ಹಣಕಾಸು ನಿರ್ವಹಣೆ, ವ್ಯವಹಾರದಲ್ಲಿ ಯಶಸ್ಸು ಹೊಂದುವ ಬಗ್ಗೆ ಎರಡನೇ ಹಂತದ ತರಬೇತಿಯನ್ನು ಫಲಾನುಭವಿಗೆ ನೀಡುವುದು.

ವ್ಯವಸ್ಥಾಪಕ ನಿರ್ದೇಶಕರು

Scanned with CamScanner

## ಅನುಬಂಧ-5

### ಚರ್ಮಕಾರರ ಕಿರು ಆರ್ಥಿಕ ಚಟುವಟಿಕೆಗಳಿಗಾಗಿ ನೇರ ಸಾಲ ಯೋಜನೆ.

1. ಆಯ್ಕೆಯಾದ ಫಲಾನುಭವಿಗಳಿಗೆ ಯೋಜನೆ ಬಗ್ಗೆ ತಿಳುವಳಿಕೆ/ ತರಬೇತಿ ನೀಡುವುದು ಮತ್ತು ಯೋಜನಾ ವರದಿಯನ್ನು ತಯಾರಿಸಲು ನಿಗಮದಿಂದ ಸಹಕರಿಸುವುದು.

2. ಯೋಜನೆಯ ಮಾರ್ಗಸೂಚಿಯಂತೆ ಆಯ್ಕೆಯಾದ ಅರ್ಹ ಫಲಾನುಭವಿಗಳ ಬಗ್ಗೆ ಜಿಲ್ಲಾ ಸಂಯೋಜಕರು ಸ್ಥಳ ಪರಿಶೀಲನೆ ಮಾಡಿ ಫಲಾನುಭವಿಯು ನೇರ ಸಾಲ ಪಡೆಯುವ ಉದ್ದೇಶ ಮತ್ತು ಅವರು ಚರ್ಮಗಾರಿಕೆಗೆ ಸಂಬಂಧಿಸಿದ ಕಿರು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅರ್ಹರೆ ಎಂಬುದನ್ನು ಖಾತ್ರಿಪಡಿಸಿಕೊಂಡು ಸಾಲ ಮತ್ತು ಸಹಾಯಧನ ಮಂಜೂರಾತಿಗೆ ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡುವುದು. ಉದ್ದೇಶಿತ ಚಟುವಟಿಕೆ ಮತ್ತು ಅವಶ್ಯಕ ಸರಕುಗಳ ಸರಬರಾಜುದಾರರ ದರಪಟ್ಟಿಯನ್ನು ಸಹ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.

3. ಜಿಲ್ಲಾ ಸಂಯೋಜಕರ ಶಿಫಾರಸ್ಸಿನ ಆಧಾರದ ಮೇಲೆ ಫಲಾನುಭವಿಯು ಸಲ್ಲಿಸಿರುವ ಉದ್ದೇಶಿತ ಚಟುವಟಿಕೆ ಮತ್ತು ಸರಕುಗಳ ಸರಬರಾಜುದಾರರ ದರಪಟ್ಟಿಯನ್ನು ಪರಿಶೀಲಿಸಿ ಶೇ. 50 ರಷ್ಟು ಸಹಾಯಧನ ಮತ್ತು ಶೇ. 50 ರಷ್ಟು ಸಾಲದ ಮೊತ್ತವನ್ನು ಉದ್ದೇಶಿತ ಘಟಕದ ಸ್ವರೂಪವನ್ನು ಪರಿಗಣಿಸಿ ಸರಬರಾಜುದಾರರಿಗೆ ಬಿಡುಗಡೆ ಮಾಡುವುದು. ಬಿಡುಗಡೆಯಾದ ಮೊತ್ತವನ್ನು ಬಳಸಿ ವ್ಯಾಪಾರ ಚಟುವಟಿಕೆ ಪ್ರಾರಂಭಿಸುವುದು.

4. ನಂತರ ಜಿಲ್ಲಾ ಸಂಯೋಜಕರು ಸ್ಥಳ ಪರಿಶೀಲನೆ ಮಾಡಿ ಫಲಾನುಭವಿಯು ಉದ್ದೇಶಿತ ವ್ಯಾಪಾರ ಚಟುವಟಿಕೆಗೆ ಸಹಾಯಧನ ಮತ್ತು ಸಾಲದ ಮೊತ್ತವನ್ನು ಬಳಸಿಕೊಂಡು ಆರ್ಥಿಕ ಚಟುವಟಿಕೆ ಪ್ರಾರಂಭಿಸಿರುವ ಬಗ್ಗೆ ಖಾತ್ರಿಪಡಿಸಿಕೊಂಡು ಛಾಯಾಚಿತ್ರದೊಂದಿಗೆ ಉಳಿದ ಶೇ. 50 ರಷ್ಟು ಸಹಾಯಧನ ಮತ್ತು ಸಾಲದ ಮೊತ್ತವನ್ನು ಬಿಡುಗಡೆ ಮಾಡಲು ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡುವುದು. ಇದರ ಆಧಾರದ ಮೇಲೆ ಉಳಿದ ಶೇ. 50 ರಷ್ಟು ಮೊತ್ತವನ್ನು ಫಲಾನುಭವಿಗಳ ಸಹಮತಿಯೊಂದಿಗೆ ಸರಬರಾಜುದಾರರಿಗೆ ನೇರವಾಗಿ ಬಿಡುಗಡೆ ಮಾಡುವುದು.

5. ಫಲಾನುಭವಿಗಳು ಉದ್ದೇಶಿತ ಕಾರ್ಯಕ್ಕೆ ಸಹಾಯಧನ ಮತ್ತು ಸಾಲ ಬಳಸಿಕೊಂಡು ವ್ಯಾಪಾರ ನಡೆಸುತ್ತಿರುವ ಬಗ್ಗೆ ಜಿಲ್ಲಾ ಸಂಯೋಜಕರುಗಳು ಪರಿಶೀಲಿಸಿ ಖಾತ್ರಿಪಡಿಸಿಕೊಂಡು ಯೋಜನೆಯು ಪರಿಪೂರ್ಣವಾಗಿ ಅನುಷ್ಠಾನಗೊಂಡಿರುವ ಬಗ್ಗೆ ವರದಿಯನ್ನು ಛಾಯಾಚಿತ್ರದೊಂದಿಗೆ ನಿಗಮದ ಕೇಂದ್ರ ಕಛೇರಿಗೆ ಸಲ್ಲಿಸುವುದು.

6. ಮಾರಾಟ ಮಳಿಗೆ ಮತ್ತು ವ್ಯಾಪಾರ ನಿರ್ವಹಣೆ ಬಗ್ಗೆ ವೈಯಕ್ತಿಕ ಶಿಸ್ತು, ಗ್ರಾಹಕರ ಜೊತೆ ಸಂಬಂಧ, ಸಂವಹನ ಕೌಶಲ್ಯಗಳು, ಹಣಕಾಸು ನಿರ್ವಹಣೆ, ವ್ಯವಹಾರದಲ್ಲಿ ಯಶಸ್ಸು ಹೊಂದುವ ಬಗ್ಗೆ ಎರಡನೇ ಹಂತದ ತರಬೇತಿಯನ್ನು ಫಲಾನುಭವಿಗೆ ನೀಡುವುದು.

ವ್ಯವಸ್ಥಾಪಕ ನಿರ್ದೇಶಕರು

Scanned with CamScanner